## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 820/2015

ಸಾಕ್ಷಿಗೆ ದಿನಾಂಕ 22-08-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 7 P.W.: 6

| | | |
|---|---|---|
| ಹೆಸರು | ಃ | ಅರಲೂರು ಮಲ್ಲಪ್ಪ |
| ತಂದೆಯ ಹೆಸರು | ಃ | ವೀರಜ್ಜಪ್ಪ |
| ವಯಸ್ಸು | ಃ | 78 ವರ್ಷ |
| ಉದ್ಯೋಗ | ಃ | ವಿಶ್ರಾಂತಿ |
| ವಾಸ ಸ್ಥಳ | ಃ | ಹಂಪಸಾಗರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 11-12-2014 ರಂದು ಹಂಪಸಾಗರ-2 ನೇ ಕಾಲೋನಿಯಲ್ಲಿರುವ ನಮ್ಮ ಮನೆ ಕಳುವಾಗಿತ್ತು. ಬಂಗಾರ ಮತ್ತು ಸೀರೆಗಳು ಕಳುವಾಗಿದ್ದವು ಅವು ನಮಗೆ ವಾಪಾಸ್ ಸಿಕ್ಕಿರುತ್ತವೆ. ಬಂಗಾರದ ಸಾಮಾನುಗಳೆಂದರೆ ಒಂದು ಚೈನುಸರ, ಒಂದು ಬೋರ್ಮಳ ಸರ ಮತ್ತು ಜುಮುಕಿ. ಅದರ ಅಂದಜು ತೂಕ 10 ಗ್ರಾಂ ಇರಬಹುದು. ಸುಮಾರು 20-30 ಸೀರೆ ಇರಬಹುದು. ಮನೆ ಕಳುವಾದ ಸಮಯದಲ್ಲಿ ನಾನು, ನನ್ನ ಹೆಂಡತಿ ಪೂನಾಕ್ಕೆ ಹೋಗಿರುತ್ತೇವೆ. ಮನೆಗೆ ಬೀಗವನ್ನು ಹಾಕಿಕೊಂಡು ನಾವು ಪೂನಾಕ್ಕೆ ಹೋಗಿರುತ್ತೇವೆ. ಚಾಸಾ-9 ರವರು ನನ್ನ ಸಹೋದರನಾಗಿದ್ದು ಅವರು ಚಾಸಾ-1 ರವರಿಗೆ ಮನೆ ಕಳುವಾದ ವಿಚಾರವನ್ನು ದಿಃ12-12-2014 ರಂದು ತಿಳಿಸಿರುತ್ತಾರೆ. ಈ ವಿಚಾರವನ್ನು ನನಗೆ ಚಾಸಾ-9 ರವರು 13-12-2014 ರಂದು ತಿಳಿಸಿರುತ್ತಾರೆ. ನಮ್ಮ ಮನೆಯ ಬಾಗಿಲ ಚಿಲಕದ ಕೊಂಡಿಯನ್ನು ಹಾರೆಕೋಲಿನಿಂದ ಕಿತ್ತು ಒಳಗೆ ಹೋಗಿ ಗಾಡ್ರೆಜ್ ಕಪಾಟಿನ ಬೀಗವನ್ನು ತೆಗೆದು ಕಳುವು ಮಾಡಿರುತ್ತಾರೆ. ದಿಃ12-12-2014 ರಂದು ನನ್ನ ಮಗಳು ಚಾಸಾ-1 ರವರು ದೂರು ನೀಡಿರುತ್ತಾರೆ. ನಂತರ ನಾನು ಮತ್ತು ನನ್ನ ಹೆಂಡತಿ ಚಾಸಾ-6 ರವರು ಸೇರಿ ದಿಃ13-12-2014 ರಂದು ನಮ್ಮ ಊರಿಗೆ ಬಂದಿರುತ್ತೇವೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನಮ್ಮ ಬಂಗಾರ, ಸೀರೆಗಳು ಸಿಕ್ಕಿರುತ್ತವೆ ಕಳ್ಳರು ಸಿಕ್ಕಿದ್ದಾರಂತಾ ಪೋಲೀಸರು ಸ್ವಲ್ಪ ದಿವಸದ ನಂತರ ಪೋಲೀಸರು ನಮಗೆ ತಿಳಿಸಿರುತ್ತಾರೆ. ನಂತರ ನಮಗೆ ಪೋಲೀಸರು ಠಾಣೆಗೆ ಕರೆದರು ನಾವು ಅಲ್ಲಿಗೆ ಹೋಗಿ ಕಳುವಾದ ವಸ್ತುಗಳನ್ನು ನೋಡಿ ಗುರುತಿಸಿರುತ್ತೇವೆ ಮತ್ತು ಪೋಲೀಸರಿಂದ ಅವುಗಳನ್ನು ಪಡೆದುಕೊಂಡಿರುತ್ತೇವೆ. ಕಳ್ಳರು ಯಾರು, ಏನು ಅವರ ಹೆಸರೇನು ಅಂತಾ ನನಗೆ ಗೊತ್ತಿಲ್ಲ. ನಾವು ಕಳ್ಳರನ್ನು ನೋಡಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಮರುಹೇಳಿಕೆ ನೀಡಿಲ್ಲ. ಕಳ್ಳರನ್ನು ನೋಡಿದರೆ ನನಗೆ ಗುರುತು

ಹಿಡಿಯಲು ಆಗುವುದಿಲ್ಲ. ಪೋಲೀಸ್ ಠಾಣೆಯಿಂದ ಬಿಡುಗಡೆ ಮಾಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ನಿಪಿ-13 ಮತ್ತು 14 ರಲ್ಲಿರುವ ಬಂಗಾರ ಮತ್ತು ಸೀರೆಗಳನ್ನು ನೋಡಿ ಗುರುತಿಸಿರುತ್ತಾರೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ನನ್ನ ಮಗಳು ದಿಃ13-12-2014 ರಂದು ರಾತ್ರಿ 8 ಗಂಟೆ ಸಮಯದಲ್ಲಿ ದೂರು ನೀಡಿರುತ್ತಾರೆಂದರೆ ಸರಿ. ದಿಃ30-12-2014 ರಂದು ಪೋಲೀಸರು ನನಗೆ ಚಾಸಾ-1 ಮತ್ತು 6 ರವರಿಗೆ ನಿಮ್ಮ ಕಳುವಾದ ವಸ್ತುಗಳು ಸಿಕ್ಕಿರುತ್ತವೆ ಅವುಗಳನ್ನು ಬಂದು ಗುರುತಿಸಿ ಅಂತಾ ತಿಳಿಸಿದ್ದರು ಎಂದರೆ ಸರಿ. ಆಗ ನಾವು ಠಾಣೆಗೆ ಹೋಗಿ ಅವುಗಳನ್ನು ಗುರುತಿಸಿರುತ್ತೇವೆಂದರೆ ಸರಿ. ಆಗ ಸಿಪಿಐ ರವರು ಠಾಣೆಯಲ್ಲಿ ಆರೋಪಿತರನ್ನು ತೋರಿಸಿ ಅವರ ಹೆಸರುಗಳನ್ನು ನನಗೆ ಹೇಳಿರುತ್ತಾರೆಂದರೆ ಸರಿ. ಆಗ ಆರೋಪಿತ ನಂ.1, 3, 4 ರವರು ನಮ್ಮ ಊರಿಗೆ ಬಂದು ನಮ್ಮ ಮನೆಯ ಬೀಗವನ್ನು ಮುರಿದು ಗಾಡ್ರೆಜನ್ನು ತೆಗೆದು ಬಂಗಾರ ಮತ್ತು ಸೀರೆಗಳನ್ನು ಕಳುವು ಮಾಡಿರುತ್ತೇವಂತಾ ಪೋಲೀಸರು ಮುಂದೆ ಹೇಳಿರುತ್ತಾರೆಂದರೆ ಸರಿ. ಆ ಮೂರು ಜನ ಮತ್ತು ಹೊರಗಡೆ ಕಾಯುತ್ತಾ ಇದ್ದ 2ನೇ ಆರೋಪಿತ ಜೊತೆ ಕೂಡಿ ವಸ್ತುಗಳನ್ನು ಹಂಚಿಕೊಂಡಿರುತ್ತೇವಂತಾ ಪೋಲೀಸರ ಮುಂದೆ ಹೇಳಿರುತ್ತಾರೆಂದರೆ ಸರಿ. ಅವರು ನಾವು ಕಳ್ಳತನ ಮಾಡಿದ ವಸ್ತುಗಳು ಇವೇ ಅಂತಾ ನಮ್ಮ ಮುಂದೆ ತೋರಿಸಿದ್ದು ಅದನ್ನು ನಾನು ಗುರುತಿಸಿರುತ್ತೇನೆಂದರೆ ಸರಿ. ನನ್ನ ಹೇಳಿಕೆಯಲ್ಲಿ ಪೋಲೀಸರು ಬಂಗಾರದ ಆಭರಣದ ವಿವರಣೆ ಮತ್ತು ಸೀರೆಗಳ ಬಗ್ಗೆ ವಿವರವಾಗಿ ಬರೆದರೆಂದರೆ ಸರಿ. ಆಗ ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿದ್ದೇನೆಂದರೆ ಸರಿ. ಆರೋಪಿತ ನಂ.1, 3, 4 ರವರನ್ನು ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ. 4ನೇ ಆರೋಪಿತನು ಮರಣ ಹೊಂದಿದ್ದಾನೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸಬಹುದು ಆದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. 1ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ಚಾಸಾ-1 ನನ್ನ ಮಗಳು, ಚಾಸಾ-6 ನನ್ನ ಹೆಂಡತಿ, ಚಾಸಾ-2 ರಿಂದ 4 ರವರು ನಮ್ಮ ಊರಿನವರು ನನಗೆ ಬೇಕಾದವರು ಎಂದರೆ ಸರಿ. ಚಾಸಾ-8 ನನ್ನ ಅಳಿಯ, ಚಾಸಾ-9, 10 ನಮ್ಮ ಊರನವರು ಎಂದರೆ ಸರಿ. ಚಾಸಾ-9 ನನ್ನ ಖಾಸಾ ಸಹೋದರ ಎಂದರೆ ಸರಿ. ಚಾಸಾ-10 ನನ್ನ ಸಂಬಂಧಿಕರೆಂದರೆ ಸರಿ.

ನನ್ನ ಹೇಳಿಕೆಯಲ್ಲಿ ನನಗೆ ಸಾಮಾನುಗಳನ್ನು ಕೊಟ್ಟ ವಿಚಾರ ಮಾತ್ರ ಗೊತ್ತು. ಉಳಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಕಳುವಾದ ಸಮಯದಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಎಷ್ಟು ತೂಕದ ಬಂಗಾರದ ಆಭರಣಗಳು ಕಳುವಾಗಿರುತ್ತವೆ ಅಂತಾ ನನಗೆ ಹೇಳಲು ಬರುವುದಿಲ್ಲ. ಯಾವ್ಯಾವ ಆರೋಪಿತರಿಂದ ಯಾವ್ಯಾವ ವಸ್ತುಗಳನ್ನು ಪೋಲೀಸರು ವಶಪಡಿಸಿಕೊಂಡರು ಅಂತಾ ನನಗೆ ಹೇಳಲು ಬರುವುದಿಲ್ಲ. ಆ ದಿನ ಆರೋಪಿತರು ಯಾವ್ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಅಂತಾ ನನಗೆ ಈಗ ಹೇಳಲು ಬರುವುದಿಲ್ಲ. ಕಳುವಾದ ವಸ್ತುಗಳನ್ನು ನಮಗೆ ತಂಬ್ರಹಳ್ಳಿ ಪೋಲೀಸ್ ಠಾಣೆಯವರು ನೀಡಿರುತ್ತಾರೆ. ಆ ದಿನ ಯಾವುದೇ ಕಳುವು ನಮ್ಮ ಮನೆಯಾಗಿರುವುದಿಲ್ಲವೆಂದರೆ ಸರಿಯಲ್ಲ. ಮುರಿದ ಚಿಲಕವನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಘಟನೆಗೂ ಆರೋಪಿತರಿಗೂ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲವೆಂದರೆ ಸಾಕ್ಷಿಯು ನನಗೆ ಕಳುವು ಮಾಡಿದ್ದ ವಿಚಾರ ಮಾತ್ರ ನನಗೆ ಗೊತ್ತು ಎನ್ನುತ್ತಾರೆ. ನಾವು ಆ ದಿನ ಠಾಣೆಗೆ ಹೋಗಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ಯಾವುದೇ ಆರೋಪಿರುಗಳನ್ನು ಗುರುತಿಸಿಲ್ಲವೆಂದರೆ ಸುಳ್ಳು. ಯಾರು ನನ್ನ ಮನೆ ಕಳುವು ಮಾಡಿರುತ್ತಾರೆನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಸ. ಸ. ಅಭಿಯೋಜಕರವರಿಂದಃ-

ನನ್ನ ಮಗಳು ನ್ಯಾಯಾಲಯದಿಂದ ಆದೇಶವನ್ನು ಪಡೆದ ಮೇರೆಗೆ ಪೋಲೀಸರು ಸದರಿ ವಸ್ತುಗಳನ್ನು ನನ್ನ ತಹಬದಿಗೆ ನೀಡಿರುತ್ತಾರೆಂದರೆ ಸರಿ.

ಪಾಟೀ ಸವಾಲುಃ. 2, 3 ಮತ್ತು 4ನೇ ಆರೋಪಿ ಪರ ವಕೀಲರು 1ನೇ ಆರೋಪಿತರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ